(ಗೊಂದಲ)

ಶ್ರೀ ಜೆ.ಹೆಚ್. ಪಟೇಲ್ : ವಾಕ್ ಔಟ್ ಮಾಡುವುದಕ್ಕಿಂತ ಮುಂಚೆ ಒಂದೇ ಒಂದು ಮಾತನ್ನು ಹೇಳುತ್ತೇನೆ. ನೀವು ವಾಕ್ ಔಟ್ ಮಾಡುವುದಕ್ಕೆ ನನ್ನ ಅಭ್ಯಂತರವಿಲ್ಲ. ಪರ್ಮನೆಂಟ್ ಆಗಿ ಇನ್ನು ಮೂರು ವರ್ಷಕ್ಕೂ ಹೊರಗೆ ಹೋಗಿ

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಕರ್ನಾಟಕ ಸರ್ಕಾರದಲ್ಲಿ ಯಾವ ಯಾವ ಸಂದರ್ಭದಲ್ಲಿ ಅನ್ಯಾಯ ಮಾಡಿದೆ ಎಂದು ತಾವು ಹೇಳುತ್ತಲೇ ಇಲ್ಲವಲ್ಲಾ. ಎಲ್ಲರೂ ಹೊರಗೆ ಹೋಗಿ ಎಂದು ಯಾರಿಗೆ ಹೇಳುತ್ತೀರಿ?

ಶ್ರೀ ಜೆ.ಹೆಚ್. ಪಟೇಲ್ : ಏನಾದರೂ ತಪ್ಪು ಮಾಡಿದ್ದರೆ ತಪ್ಪು ಎಂದು ಹೇಳುತ್ತೇವೆ. ತಪ್ಪು ಮಾಡದಿದ್ದರೆ ಏಕೆ ತಪ್ಪು ಎನ್ನುತ್ತಾರೆ. ರಾಜ್ಯದ ಹಿತವನ್ನು ಎಷ್ಟು ಚೆನ್ನಾಗಿ ಕಾಪಾಡುತ್ತಾರೆ ನೋಡಿ. ಇವರೆಲ್ಲಾ ರಾಜ್ಯದ ಹಿತವನ್ನು ಕಾಪಾಡುವವರು!

(ಈ ಹಂತದಲ್ಲಿ ಬಿಜೆಪಿ ಸದಸ್ಯರುಗಳು ಸಭಾತ್ಯಾಗ ಮಾಡಿದರು. ಮತ್ತು ಮಾನ್ಯ ವಾಟಾಳ್, ನಾಗರಾಜ್‌ರವರು ಸಹ ಸಭಾತ್ಯಾಗ ಮಾಡಿದರು.)

ಶ್ರೀ ಜೆ.ಹೆಚ್.ಪಟೇಲ್ : ಇವರು ಹೇಳಿದ್ದೆಲ್ಲಾ ಹೇಗಾಯಿತು ಎಂದರೆ ಇಷ್ಟೊತ್ತಿನತನಕ ಅವರ ಭಾಷಣಗಳನ್ನು ಕೇಳಿದಾಗ ಒಂದು ಖಾಲಿ ಕ್ಯಾನವಾಸ್ ಇತ್ತು. ದೊಡ್ಡದಾದ ಪಟ. ಅವರಿಗೆ ನಾನು ಕೇಳಿದೆ, ಪಟದಲ್ಲಿ ಏನಿದೆ ಎಂದು. ಖಾಲಿ ಇದೆ ಎಂದಾಗ ಅರೆ, ಒಂದು ಆಕಳು ಹುಲ್ಲು ಮೇಯುತ್ತಾ ಇದೆ, ಅದನ್ನು ನೋಡಲಿಲ್ಲವೇ? ಎಂದು ಅವರು ಅಪೋಜಿಷನ್ ಲೀಡರ್ ಹೇಳಿದರು. ಹುಲ್ಲು ಎಲ್ಲಿ ಕಾಣುವುದಿಲ್ಲವಾ ಎಂದಾಗ ಆಕಳು ಮೇಯ್ದಿದೆ ಎಂದು, ಆಮೇಲೆ ಆಕಳು ಎಲ್ಲಿ ಎಂದಾಗ ಮೇಯ್ದ ಕೂಡಲೇ ಅದು ಹೊರಟುಹೋಯಿತಲ್ಲಾ. ಹೀಗೆ ಅವರು ಇಷ್ಟೊತ್ತಿನತನಕ ತವಡು ಕುಟ್ಟಿದರು. ತವಡು ಕುಟ್ಟುವುದು ಎಂದರೆ ಇದೇ. ಏನೂ ಇಲ್ಲದ ಕ್ಯಾನವಾಸ್‌ನಲ್ಲಿ ಹುಲ್ಲು, ಆಕಳನ್ನು ಕಂಡವರು ಇವರು. ಆದ್ದರಿಂದ ಇದು ತಮಗೆ ವೇದ್ಯವೇ ಇದೆ. ಈ ಪಾರ್ಟಿ, ಈ ಸರ್ಕಾರ ನಮಗೆ ಎಲ್ಲಾ ರೀತಿಯಿಂದ We want our Prime Minister to continue as long as possible. ಅದಕ್ಕೆ ಬೇಕಾಗುವ ಸ್ನೇಹವನ್ನು ಗಳಿಸಿಕೊಳ್ಳುವುದಕ್ಕೆ ಎಲ್ಲಾ ಮಾಡುತ್ತೇವೆ. ಆದರೆ ರಾಜ್ಯದ ಹಿತವನ್ನು ಮಾತ್ರ ಯಾವ ಕಾಲಕ್ಕೂ ಬಿಡುವುದಿಲ್ಲ ಎಂದು ಹೇಳಿ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಉಪಸಭಾಧ್ಯಕ್ಷರು ಬಂದಿಲ್ಲ. ಎಲ್ಲಾ ವಿರೋಧ ಪಕ್ಷಗಳವರೂ ಹೊರಗಿದ್ದಾರೆ. ಎಲ್ಲರೂ ಊಟ ಮಾಡಿಕೊಂಡು ಬರೋಣ. ಮತ್ತೆ 3-00 ಗಂಟೆಗೆ ಸೇರೋಣ.

(ಸದನವು 1-30ಕ್ಕೆ ಮುಕ್ತಾಯಗೊಂಡು ಮತ್ತೆ 3-00 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)